### ಮೊಬೈಲ್ ಕ್ಲಾಸ್‌ರೂಮ್

ಮೇ 7ರ ಸಂಚಿಕೆಯಲ್ಲಿ ಪ್ರವೀಣ ಕುಲಕರ್ಣಿ ಬರೆದ ‘ಮಕ್ಕಳ ಸ್ಕೂಲು ಮೊಬೈಲ್‌ನಲ್ಲಿಲ್ಲವೇ?’ ಲೇಖನ ಚೆನ್ನಾಗಿತ್ತು. ಗುರುಕುಲ ವಿದ್ಯಾಭ್ಯಾಸ ಪದ್ಧತಿ ಅನುಸರಿಸುತ್ತಿದ್ದ ಭಾರತಲ್ಲಿಯೂ ಸಹ ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ಕಲಿಕೆ ಆರಂಭವಾಗಿದೆ. ಕಿರುತೆರೆಯಲ್ಲಿ ಹಾಗೂ ಇತರೆ ಮಾಧ್ಯಮಗಳಲ್ಲಿನ ಆನ್‌ಲೈನ್ ಶಾಲೆಗಳ ಸೆಲೆಬ್ರಿಟಿಗಳನ್ನೊಳಗೊಂಡ ಜಾಹೀರಾತುಗಳಿಗೇ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದನ್ನು ಗಮನಿಸಿದರೆ ಇದೊಂದು ಕೇವಲ ವಾಣಿಜ್ಯ ವ್ಯವಹಾರ ಎಂಬುದು ಗೊತ್ತಾಗುತ್ತದೆ. ಕೊರೊನಾ ಲಾಕ್ ಡೌನ್ ಸಮಯದಲ್ಲಿ ಈ ಪದ್ಧತಿ ನೆರವಾಗಬಹುದಾದರೂ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಸಾಂಪ್ರದಾಯಿಕ ಶಾಲಾ ಶಿಕ್ಷಣವೇ ಸೂಕ್ತ. ಮಕ್ಕಳು ಬೆಳೆಯುವುದು ಕೇವಲ ಪುಸ್ತಕ ಜ್ಞಾನದಿಂದಲ್ಲ. ಸಕಲ ವರ್ಗಗಳ ಮಕ್ಕಳೊಟ್ಟಿಗೆ ಬೆರೆಯುವುದರಿಂದ, ನಕ್ಕು ನಲಿಯುವುದರಿಂದ; ಆಟದ ಜೊತೆಯಲ್ಲಿ ಪಾಠ, ಚೇಷ್ಟೆ, ತುಂಟಾಟಗಳೂ ಅಗತ್ಯ; ತರಗತಿಯಲ್ಲಿ ಗುರುಗಳ ಮಾರ್ಗದರ್ಶನ ಹಾಗೂ ಉಪಸ್ಥಿತಿಯೇ ವಿದ್ಯಾರ್ಥಿಗಳಿಗೆ ಸ್ಫೂರ್ತಿ.

—ರಾಜೀವ್ ಎನ್ ಮಾಗಲ್ ಹಾಸನ
ಪುಷ್ಪಾ ಶ್ರೀರಾಮ್, ಬೆಂಗಳೂರು

### ಗಾನ ನಾಟ್ಯದ ಹಾಯಿದೋಣಿ

ಮೇ 7ರ ಸಂಚಿಕೆಯಲ್ಲಿ ಉಮಾ ಅನಂತ್ ಬರೆದ ‘ಗಾನ ನಾಟ್ಯದ ಹಾಯಿದೋಣಿ..’ ಲೇಖನ ಓದಿದೆ. ಇತ್ತೀಚಿನ ಅಂತರ್ಜಾಲದ ಸಂವಹನ ಸಂಗೀತ, ನೃತ್ಯಕ್ಕೂ ಕೈಚಾಚಿತಲ್ಲಾ ಎಂಬುದು ಅಚ್ಚರಿ ಹುಟ್ಟಿಸುತ್ತದೆ. ಲೇಖನದಲ್ಲಿ ವಿವರವಾಗಿ ಸಂಗೀತ ತರಗತಿಗಳ ಪರಿಣಾಮಗಳನ್ನು ವಿಭಿನ್ನ ನೆಲೆಗಳ ಮೂಲಕ ನೋಡಿದ್ದಾರೆ.

—ವೆಂಕಟೇಶ ಎಂ.ಎ., ದಾವಣಗೆರೆ



### ಕೆರೆಗಳ ಓದು

ಮೇ 7ರ ಸಂಚಿಕೆಯಲ್ಲಿ ಪ್ರಕಟವಾದ ಶಿವಾನಂದ ಕಳವೆಯವರ ‘ಕೆರೆಗಳನ್ನು ಓದುವುದು ಹೇಗೆ?’ ಲೇಖನ ಬೇಸಿಗೆಯ ನೀರಿನ ಬರದ ಸಮಯದಲ್ಲಿ ಅರ್ಥಪೂರ್ಣ, ಸಾಂದರ್ಭಿಕ. ಇನ್ನಾದರೂ ನಾಡಿನ ಜನರು ಕೆರೆಗಳ ಸಂರಕ್ಷಣೆಯ ಹೊಣೆಯನ್ನು ಸ್ಥಳೀಯ ಆಡಳಿತದ ಜೊತೆಗೆ ಸೇರಿಕೊಂಡು ಮಾಡಿದರೆ ಕೆರೆಗಳು ಉಳಿದಾವು.

—ಭರತ, ಕಾರ್ಕಳ

### ರಾಮಾನುಜನ್ ಗಣಿತದ ಮೇರು ಪ್ರತಿಭೆ

ಮೇ 7ರ ಸಂಚಿಕೆಯಲ್ಲಿ ದೇಶದ ಶ್ರೇಷ್ಠ ಗಣಿತಜ್ಞ ಶ್ರೀನಿವಾಸ ರಾಮಾನುಜನ್‌ರ ಬಗ್ಗೆ ಸಿಡ್ನಿ ಶ್ರೀನಿವಾಸ್ ಬರೆದ ಲೇಖನ ಪ್ರಸ್ತುತವಾಗಿತ್ತು. ಅವರು ನಮ್ಮನ್ನು ಅಗಲಿ 2020ಕ್ಕೆ ಭರ್ತಿ ಒಂದು ನೂರು ವರ್ಷಗಳು.

ಕೇವಲ 32 ವರ್ಷ ಬದುಕಿದ್ದ ರಾಮಾನುಜನ್ ಗಣಿತದಲ್ಲಿ ಅದ್ಭುತವಾದ ಸಂಶೋಧನೆ ಮತ್ತು ಕ್ರಾಂತಿಯನ್ನೇ ಮಾಡಿದರು. ಲೇಖನವನ್ನು ಓದಿದ ನಂತರ ಅಲ್ಪಕಾಲ ಬದುಕಿದ ಮಹನೀಯರುಗಳೆ ಶ್ರೇಷ್ಠ ಸಾಧನೆಗೆ ಕಾರಣರಾಗಿದ್ದಾರೆ ಎನ್ನಿಸಿತು. ಉದಾಹರಣೆಗೆ ಜಗದ್ಗುರು ಶ್ರೀ ಶಂಕರಾಚಾರ್ಯರು, ಸ್ವಾಮಿ ವಿವೇಕಾನಂದರು ಇತ್ಯಾದಿ ಹೆಸರುಗಳನ್ನು ಹೆಸರಿಸಬಹುದು. ರಾಮಾನುಜನ್ ಗಣಿತಕ್ಕೆ ಒಂದು ಕೀರ್ತಿ ರತ್ನ.

—ಅರುಣ ಬಿ. ಕುಲಕರ್ಣಿ, ಗದಗ



ಗಣಿತ ಶಿಖರ ರಾಮಾನುಜನ್ ಕುರಿತ ಲೇಖನ ಉಪಯುಕ್ತವಾಗಿದೆ. ‘ಕನ್ನಡಕ್ಕೊಬ್ಬನೇ ಕೈಲಾಸಂ’ ಎಂಬಂತೆ ‘ಗಣಿತಕ್ಕೊಬ್ಬನೇ ರಾಮಾನುಜನ್’. ಅತಿ ವಿರಳ; ಗಣಿತದ ಅಗಣಿತ ಗಣಿ ಅವರು.

—ಸುಮನಾ



## ಯಲ್ಲಮ್ಮನ ಹುಡುಕುತ್ತಾ

‘ಸವದತ್ತಿ ಯಲ್ಲಮ್ಮನ ಹುಡುಕುತ್ತಾ...’ (ಮೇ 7: ರಾಘವೇಂದ್ರ ಕೆ.) ಲೇಖನ ಓದಿ ತುಂಬಾ ಖುಷಿಯಾಯ್ತು. ಈ ನೆಲದ ಎದೆಗಳಲ್ಲಿ ಬಿತ್ತಿ ಬೆಳೆದ ಅಪೂರ್ವ ಹಾಡುಗಳ ಕಣಜ ಚೌಡಿಕೆ ಪದಗಳು ಹಾಗೂ ಏಕನಾದವು ಮೀಟಿದಂತೆ ಕೇಳುವ ಜೋಗತಿ ಜಂಗಮರ ಪರಂಪರೆಯನ್ನ ‘ಅರ್ಬನ್ ಫೋಕ್ ಪ್ರಾಜೆಕ್ಟ್ ಸಂಸ್ಥೆ’ಯ ಶಿಲ್ಪಾ ಮುಡಬಿ ಮತ್ತು ಆದಿತ್ಯ ಆಧುನಿಕ ಜಗತ್ತಿಗೆ ಪರಿಚಯಿಸುತ್ತಿರುವುದು ಎದೆಯ ಹಾಡಿನ ಸುಖದುಃಖಗಳನ್ನು ಬಲ್ಲವರಿಗೆ ಹೆಮ್ಮೆಯ ವಿಷಯ. ಶಿಲ್ಪಾ ಅವರ ದನಿಯಂತೂ ನಮ್ಮ ಹಿರಿಯ ಲೇಖಕರಾದ ಮೊಗಳ್ಳಿ ಗಣೇಶ್ ಅವರ ಮಾತಿನಲ್ಲಿ ಹೇಳುವುದಾದರೆ, ನಮ್ಮ ಆದಿಯ ಕುಲದ ನಾಭಿಯನ್ನು ಮಿಡಿಸಿದ ಹಾಗೆ ಕೇಳಿಸುತ್ತದೆ. ಪಾರಂಪರಿಕ ನೆಲೆಯ ಬೇರುಗಳನ್ನು ಹುಡುಕುತ್ತಾ ತನ್ನ ಅಜ್ಜಿ,ತನ್ನ ಸಂತತಿ,ಮೂಲ ಸಂಬಂಧಿಕರನ್ನು ಹುಡುಕುತ್ತಾ ಹೊಸಹಾಡಿನ ಲೋಕವೊಂದನ್ನು ಸೃಷ್ಟಿಸುತ್ತಿದ್ದಾರೆ. ನನಗೆ ಅವರನ್ನು ‘ಜನಲೋಕ ಗಾಯಕರು’ ಎಂದು ಕರೆಯುವ ಆಸೆ. ಬಹುಶಃ ಹೊಸ ತಲೆಮಾರಿನ ಹಾಡುಗಾರರ ಹಿನ್ನೆಲೆಯಲ್ಲಿ ಜಾನಪದ ಹಾಡುಗಳ ಪರಿಚಯಾತ್ಮಕ ಲೇಖನ ಸುವಿಸ್ತಾರವಾಗಿ ಪ್ರಕಟವಾಗಿರುವುದು ‘ಸುಧಾ’ ವಾರಪತ್ರಿಕೆಯಲ್ಲೇ ಇದೇ ಮೊದಲು ಎಂಬುದು ನನ್ನ ಓದಿನ ಅರಿವಿನ ಮಾತು. ಸವದತ್ತಿ ಯಲ್ಲಮ್ಮನನ್ನು ಕನ್ನಡ ಲೋಕದ ಎಲ್ಲರ ಎಲ್ಲವ್ವನ ಪರಂಪರೆಯಾಗಿ ಮಾಡುವ ತಂಡಕ್ಕೆ ಅಭಿನಂದನೆಗಳು. ಅಂದಹಾಗೆ, ಶಿಲ್ಪಾ ಮುಡಬಿಯವರು ಈ ರಾಜ್ಯದ ಐಎಎಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಬಾಬೂರಾವ್ ಮುಡಬಿ ಅವರ ಮಗಳು.

—ಸುಬ್ಬು ಹೊಲೆಯಾರ್, ಬೆಂಗಳೂರು

### ಕೆ.ಎಲ್.ಭಟ್ಟ ಸ್ಮರಣೆ

ಅನೇಕ ಹಿರಿಯ ಕಲಾವಿದರಿಗೆ ಸ್ಫೂರ್ತಿಯಾಗಿದ್ದ, ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿಗೆ ಭಾಜನರಾಗಿದ್ದ, ವಿಶ್ವಕಲಾ ದಿನದಂದೇ ನಮ್ಮನ್ನಗಲಿದ ಸರಳ ಸಜ್ಜನ ಕೆ.ಎಲ್.ಭಟ್ಟರ ಸ್ಮರಣೆಗೈದ ವಿಶ್ವನಾಥ.ಎ.ಎಸ್. ಅವರ ಲೇಖನ ಸಮಯೋಚಿತವಾಗಿದೆ.

—ಪಿ. ಜಯವಂತ ಪೈ, ಕುಂದಾಪುರ

### ಸುಂದರ ದಾಂಪತ್ಯಕ್ಕೆ ಹೊಸ ದಾರಿ

‘ಸುಖೀ ದಾಂಪತ್ಯ’ ವಿಭಾಗದಲ್ಲಿ ಪ್ರಕಟವಾಗುವ ವಿನೋದ್ ಛೆಬ್ಬಿಯವರ ಎಲ್ಲ ಲೇಖನಗಳೂ ಅರ್ಥಗರ್ಭಿತವಾಗಿರುತ್ತವೆ. ಕಳೆದ ನಾಲ್ಕೈದು ಸಂಚಿಕೆಗಳಿಂದ ಪ್ರಕಟವಾಗುತ್ತಿರುವ ‘ಹೊಸ ದಾರಿ’ ಲೇಖನಮಾಲೆ, ದಾಂಪತ್ಯದಲ್ಲಿರುವ ಹಾಗೂ ದಾಂಪತ್ಯಕ್ಕೆ ಹೆಜ್ಜೆಯಿಡುತ್ತಿರುವ ಪ್ರತಿಯೊಬ್ಬರಿಗೂ ಅನ್ವಯಿಸುವಂಥದ್ದು. ಹೊಂದಾಣಿಕೆಯಿಲ್ಲದ ದಾಂಪತ್ಯದಲ್ಲುಂಟಾಗುವ ಹಲವಾರು ಸಮಸ್ಯೆಗಳಿಗೆ ಛೆಬ್ಬಿಯವರು ತೋರಿಸಿಕೊಡುವ ಪರಿಹಾರ ಮಾರ್ಗವನ್ನು ಅನುಸರಿಸಿದರೆ ನಮ್ಮ ವೈವಾಹಿಕ ಜೀವನದಲ್ಲಿ ಅನ್ಯೋನ್ಯತೆಯ ಹೊಸ ಬೆಳಕನ್ನು ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ.

—ರಮ್ಯಾ ಪ್ರವೀಣ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in